[ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ: ರೈಸಂಕೇ/ತಾ–3/ಆತ್ಮ/21ಬಿ/2011

ಕೇಂದ್ರ ಕಛೇರಿ ನಂ.1
ಶೇಷಾದ್ರಿ ರಸ್ತೆ, ಬೆಂಗಳೂರು–1
ದಿನಾಂಕ: 07–09–11

ದೂರವಾಣಿ ಸಂ: 22215093
22215096
ಫ್ಯಾಕ್ಸ್ ಸಂ: 22212818

**ಕೃಷಿ ಇಲಾಖೆಯಲ್ಲಿ ಆತ್ಮ ಯೋಜನೆಯಡಿ ಕೆಲಸ ನಿರ್ವಹಿಸಲು**
**ಒಪ್ಪಂದದ ಮೇರೆಗೆ ಸಿಬ್ಬಂದಿ ನೇಮಕಾತಿ ಪ್ರಕಟಣೆ**

ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಡಿ/76/ಎಎಮ್‌ಎಸ್/2010, ಬೆಂಗಳೂರು ದಿನಾಂಕ:28/1/11 ಆತ್ಮ ಯೋಜನೆಯಡಿ ಈ ಕೆಳಕಂಡ ಹುದ್ದೆಗಳನ್ನು ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಷರತ್ತಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಿದೆ. ಭಾರತ ಸರ್ಕಾರದಿಂದ ಮಂಜೂರಾದ ಒಟ್ಟು 513 ವಿವಿಧ ಹುದ್ದೆಗಳಲ್ಲಿ 287 ಹುದ್ದೆಗಳು ಭರ್ತಿಯಾಗಿದ್ದು, ಉಳಿದ ಜಿಲ್ಲಾವಾರು ಹಾಗೂ ತಾಲ್ಲೂಕುವಾರು 226 ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮಕೈಗೊಳ್ಳಲಾಗಿದೆ. ಖಾಲಿ ಉಳಿದ ಹುದ್ದೆಗಳ ವಿವರಗಳಿಗೆ ಇಲಾಖಾ website http://raitamitra.kar.nic.in ನಲ್ಲಿ ಮಾಹಿತಿ ಪಡೆಯಬಹುದು.

ಅರ್ಜಿಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ದಿ: 15/10/2011ರ ಸಂಜೆ 5.30 ಗಂಟೆಯ ಒಳಗಾಗಿ ಸಲ್ಲಿಸುವುದು. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು (52), ವಿಷಯ ತಜ್ಞರು (97) ಅಕೌಂಟೆಂಟ್ ಕಮ್ ಕ್ಲರ್ಕ್ (5) ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್ (6) ಹುದ್ದೆಗಳಿಗೆ ಅರ್ಜಿಗಳನ್ನು ಸಂಬಂಧಿಸಿದ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

ರಾಜ್ಯ ಮಟ್ಟದ ಆತ್ಮ ಸಂಯೋಜಕರು (1), ಸಮೇತಿಗಳ ಉಪನಿರ್ದೇಶಕರು (5) ಯೋಜನಾ ನಿರ್ದೇಶಕರು (21) ಉಪ ಯೋಜನಾ ನಿರ್ದೇಶಕರು (38) ಮತ್ತು ಅಕೌಂಟೆಂಟ್ ಕಮ್ ಕ್ಲರ್ಕ್ (ಸಮೇತಿ ದಕ್ಷಿಣ) (1) ಹುದ್ದೆಗಳಿಗೆ ಅರ್ಜಿಯನ್ನು ನೇರವಾಗಿ ಉಪ ಕೃಷಿ ನಿರ್ದೇಶಕರು, ರೈತ ಸಂಪರ್ಕ ಕೇಂದ್ರ, ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು ಇಲ್ಲಿಗೆ ಸಲ್ಲಿಸುವುದು. ಲಕೋಟೆಯ ಮೇಲೆ ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಕೆಂಪು ಶಾಯಿಯಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.

**ಹುದ್ದೆಗಳ ವಿವರ :**

| ಕ್ರ ಸಂ | ಹುದ್ದೆಯ ಹೆಸರು | ವಿದ್ಯಾರ್ಹತೆ | ಅನುಭವ | ಕಾರ್ಯಸ್ಥಾನ | ಮಾಹೆಯಾನ ವೇತನ (ರೂ) |
|---|---|---|---|---|---|
| 1. | ಆತ್ಮ ಸಂಯೋಜಕರು | ಕೃಷಿ ಪದವಿ/ಸ್ನಾತಕೋತ್ತರ ಪದವಿ; ಯೋಜನೆ ಹಾಗೂ ಸಂಯೋಜನೆಯಲ್ಲಿ ಸಾಕಷ್ಟು ಅನುಭವವಿರಬೇಕು | ಉಪನಿರ್ದೇಶಕರ ವೇತನ ಶ್ರೇಣಿ ರೂ. (15600/–39100+6600) ಅಥವಾ ತತ್ಸಮಾನ ಶ್ರೇಣಿಯಲ್ಲಿ 5 ವರ್ಷಗಳ ಕ್ಷೇತ್ರ ಮಟ್ಟದ ಅನುಭವ | ರಾಜ್ಯ ಮಟ್ಟದಲ್ಲಿ ಒಂದು ಹುದ್ದೆ | 30000 |
| 2. | ಉಪನಿರ್ದೇಶಕರು | ಕೃಷಿ/ಸಂಬಂಧಿತ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ | ವೇತನ ಶ್ರೇಣಿ ರೂ.15600–39100+5400 ಅಥವಾ ತತ್ಸಮಾನ ಶ್ರೇಣಿಯಲ್ಲಿ 3 ವರ್ಷಗಳ ಅನುಭವ | ಸಮೇತಿ ದಕ್ಷಿಣ, ಬೆಂಗಳೂರು (2) ಹಾಗೂ ಸಮೇತಿ ಉತ್ತರ, ಧಾರವಾಡ (3) | 15600+ಜಿಲ್ಲೆಗಳಿಗೆ ಅನ್ವಯವಾಗುವಂತೆ ಇತರ ಭತ್ಯೆಗಳು |

| | | | | | |
|---|---|---|---|---|---|
| 3. | ಯೋಜನಾ ನಿರ್ದೇಶಕರು | ಕೃಷಿ/ಸಂಬಂಧಿತ ವಿಷಯಗಳಲ್ಲಿ ಪದವಿ/ಸ್ನಾತಕೋತ್ತರ ಪದವಿ; ಸ್ನಾತಕೋತ್ತರ ಪದವಿಗೆ ಆದ್ಯತೆ | ವೇತನ ಶ್ರೇಣಿ ರೂ.15600–39100+5400 ಅಥವಾ ತತ್ಸಮಾನ ಶ್ರೇಣಿಯಲ್ಲಿ 3 ವರ್ಷಗಳ ಅನುಭವ | ಜಿಲ್ಲಾ ಮಟ್ಟ (21) | 15600+ಜಿಲ್ಲೆಗಳಿಗೆ ಅನ್ವಯವಾಗುವಂತೆ ಇತರ ಭತ್ಯೆಗಳು |
| 4. | ಉಪ ಯೋಜನಾ ನಿರ್ದೇಶಕರು | ಕೃಷಿ/ಸಂಬಂಧಿತ ವಿಷಯಗಳಲ್ಲಿ ಪದವಿ/ಸ್ನಾತಕೋತ್ತರ ಪದವಿ; ಸಂಶೋಧನಾ ಹಿನ್ನೆಲೆಯುಳ್ಳ ಅಭ್ಯರ್ಥಿಗಳಿಗೆ ಆದ್ಯತೆ | ವೇತನ ಶ್ರೇಣಿ 9300–34800+4200 ಅಥವಾ ತತ್ಸಮಾನ ಶ್ರೇಣಿಯಲ್ಲಿ 3 ವರ್ಷಗಳ ಅನುಭವ | ಜಿಲ್ಲಾ ಮಟ್ಟ (38) | 14600+ಜಿಲ್ಲೆಗಳಿಗೆ ಅನ್ವಯವಾಗುವಂತೆ ಇತರ ಭತ್ಯೆಗಳು |
| 5. | ಕಂಪ್ಯೂಟರ್ ಪ್ರೋಗ್ರಾಮರ್ | ಕಂಪ್ಯೂಟರ್ ಜ್ಞಾನವುಳ್ಳ ಯಾವುದೇ ಪದವಿಧರ, ಬಿ.ಟೆಕ್, ಎಂ.ಸಿ.ಎ ಪದವಿಧರರಿಗೆ ಆದ್ಯತೆ | 1 ವರ್ಷದ ಅನುಭವ | ಜಿಲ್ಲಾ ಮಟ್ಟ (6) | 12000 |
| 6 | ಅಕೌಂಟೆಂಟ್ ಕಮ್ ಕ್ಲರ್ಕ್ | ಯಾವುದೇ ಪದವಿಧರ/ ಬಿ.ಕಾಂ ನವರಿಗೆ ಆದ್ಯತೆ | ವೇತನ ಶ್ರೇಣಿ ರೂ.5200–20200+2400 ಅಥವಾ ತತ್ಸಮಾನ ಶ್ರೇಣಿಯಲ್ಲಿ 3 ವರ್ಷಗಳ ಅನುಭವ | ಜಿಲ್ಲಾ ಮಟ್ಟ (5) ಹಾಗೂ ಸಮೇತಿ ದಕ್ಷಿಣ (1) | 9300+ ಜಿಲ್ಲೆಗಳಿಗೆ ಅನ್ವಯವಾಗುವಂತೆ ಇತರ ಭತ್ಯೆಗಳು |
| 7 | ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು | ಕೃಷಿ/ಸಂಬಂಧಿತ ವಿಷಯಗಳಲ್ಲಿ ಪದವಿ/ಸ್ನಾತಕೋತ್ತರ ಪದವಿ; ಕಂಪ್ಯೂಟರ್ ಜ್ಞಾನವುಳ್ಳ ಅಭ್ಯರ್ಥಿಗಳಿಗೆ ಆದ್ಯತೆ | ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ 2 ವರ್ಷಗಳ ಕ್ಷೇತ್ರ ಮಟ್ಟದ ಅನುಭವ | ತಾಲ್ಲೂಕು ಮಟ್ಟ (52) | 20000 |
| 8 | ವಿಷಯ ತಜ್ಞರು | ಕೃಷಿ/ತೋಟಗಾರಿಕೆ/ಅರ್ಥಶಾಸ್ತ್ರ /ಮಾರಾಟ/ಪಶು ವೈದ್ಯಕೀಯ/ಪಶುಪಾಲನೆ/ ಮೀನುಗಾರಿಕೆ ವಿಷಯದಲ್ಲಿ ಪದವಿ/ಸ್ನಾತಕೋತ್ತರ ಪದವಿ | | ತಾಲ್ಲೂಕು ಮಟ್ಟ (97) | 8500 |

ಅರ್ಜಿಗಳನ್ನು ಪರಿಶೀಲಿಸಿದ ನಂತರ, ಅರ್ಹ ಅಭ್ಯರ್ಥಿಗಳಿಗೆ ನೇರಸಂದರ್ಶನಕ್ಕಾಗಿ ಹಾಜರಾಗಲು ದಿನಾಂಕವನ್ನು ತಿಳಿಸಲಾಗುವುದು. ಯಾವುದಾದರೂ ಒಂದು ಹುದ್ದೆಗೆ ಎರಡು ಜಿಲ್ಲೆಗಳಿಗಿಂತ ಹೆಚ್ಚು ಜಿಲ್ಲೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗೆ ಸಂಬಂಧಿಸಿದ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳನ್ನು ಸಂಪರ್ಕ ಮಾಡುವುದು.

ಕೃಷಿ ಆಯುಕ್ತರು

## ಕೃಷಿ ಇಲಾಖೆಯಲ್ಲಿ ಆತ್ಮ ಯೋಜನೆಯಡಿಯಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಜಿ

| | |
|---|---|
| **1.** ಹುದ್ದೆಯ ಹೆಸರು | |
| **2.** ಅಭ್ಯರ್ಥಿಯ ಹೆಸರು | |
| **3.** ತಂದೆಯ/ಗಂಡನ ಹೆಸರು | |
| **4.** ಜನ್ಮ ದಿನಾಂಕ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| **5.** ಅಂಚೆ ವಿಳಾಸ | |
| **6.** ಫೋನ್ ಸಂಖ್ಯೆ | |
| **7.** ಮೊಬೈಲ್ ಸಂಖ್ಯೆ | |
| **8.** ಇ–ಮೇಲ್ | |
| **9.** ಖಾಯಂ ವಿಳಾಸ | |
| **10.** ಕೆಲಸ ಮಾಡಲು ಇಚ್ಛೆಯುಳ್ಳ ಜಿಲ್ಲೆ/ತಾಲ್ಲೂಕು | |
| | ಅ) |
| | ಆ) |
| | ಇ) |
| **11.** ಪರಿಶಿಷ್ಠ ಜಾತಿ/ಪಂಗಡಕ್ಕೆ ಸೇರಿದವರೆ? (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| **12.** ವಿದ್ಯಾರ್ಹತೆ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| **13.** ಕೆಲಸದ ಅನುಭವ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| **14.** ಹಿಂದಿನ ಹುದ್ದೆಯಲ್ಲಿ ಪಡೆದ ಅಂತಿಮ ವೇತನದ ವಿವರ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| **15.** ನಡತೆ ಪ್ರಮಾಣ ಪತ್ರ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| **16.** ವೈದ್ಯಕೀಯ ಅರ್ಹತೆ ಪ್ರಮಾಣ ಪತ್ರ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |

ಫೋಟೋ

. ನೋಟ್ : ಕ್ರಮ ಸಂಖ್ಯೆ **11** ರಿಂದ **16**ರವರೆಗೆ ಯಾವುದೇ ದೃಢೀಕರಣ ಪತ್ರ ಲಗತ್ತಿಸದೇ ಇದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು

**ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಯು ಸತ್ಯವಾಗಿರುತ್ತದೆ ಎಂದು ದೃಢೀಕರಿಸುತ್ತೇನೆ.**

**ಸ್ಥಳ :** **ಸಹಿ**
**ದಿನಾಂಕ :**

## ಅನುಬಂಧ–2

## ವಿವಿಧ ಹುದ್ದೆಗಳ ಕರ್ತವ್ಯಗಳು ಹಾಗೂ ಜವಾಬ್ದಾರಿಗಳ ವಿವರ

| | | |
|---|---|---|
| 1. | ರಾಜ್ಯ ಆತ್ಮ ಸಂಯೋಜಕರು | ➢ ಜಿಲ್ಲಾ ಮಟ್ಟದಲ್ಲಿ ವಿವಿಧ ಆತ್ಮ ಸಂಸ್ಥೆಗಳು ಹಾಗೂ ಅಭಿವೃದ್ಧಿ ಇಲಾಖೆಯೊಡನೆ, ರಾಜ್ಯ ಮಟ್ಟದಲ್ಲಿ ಕೃ.ವಿ.ವಿ/ಸಮೇತಿಗಳೊಡನೆ ಹಾಗೂ ರಾಷ್ಟ್ರ ಮಟ್ಟದಲ್ಲಿ ಕೃಷಿ ಮಂತ್ರಾಲಯದೊಡನೆ ಸಂಪರ್ಕ ಏರ್ಪಡಿಸುವುದು<br>➢ ಡಿ.ಎ.ಇ.ಪಿ ಜಿಲ್ಲಾ ಕೃಷಿ ಕ್ರಿಯಾ ಯೋಜನೆ ಇತ್ಯಾದಿಗಳನ್ನು ರಾಜ್ಯ ಕೃಷಿ ಯೋಜನೆಯಲ್ಲಿ ಕ್ರೋಢೀಕರಿಸುವುದು<br>➢ ಪ್ರಗತಿ ವರದಿಯ ಕ್ರೋಢೀಕರಣ ಹಾಗೂ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವುದು<br>➢ ಅಭಿವೃದ್ಧಿ ಇಲಾಖೆಗಳ ಸಾಮರ್ಥ್ಯ ವರ್ಧನೆಯ ಅವಶ್ಯಕತೆಯನ್ನು ಗುರುತಿಸುವುದು<br>➢ ಜಿಲ್ಲೆಗಳಿಗೆ ಸಮಯೋಚಿತ ಅನುದಾನ ಬಿಡುಗಡೆ<br>➢ ರಾಜ್ಯ ಮಟ್ಟದಲ್ಲಿ ವಿವಿಧ ಇಲಾಖೆಗಳ ಮಧ್ಯ ಸಮನ್ವಯ ಸಾಧಿಸುವಲ್ಲಿ ರಾಜ್ಯ ನೋಡಲ್ ಅಧಿಕಾರಿಗೆ ಸಹಾಯ ಮಾಡುವುದು |
| 2. | ಉಪ ನಿರ್ದೇಶಕರು (ಸಮೇತಿ) | ➢ ನಿರ್ದಿಷ್ಟ ಕ್ಷೇತ್ರಗಳಲ್ಲಿ ತರಬೇತಿ ಆಯೋಜಿಸುವುದು.<br>➢ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಂಪರ್ಕ ಜಾಲ ಏರ್ಪಡಿಸುವುದು.<br>➢ ತರಬೇತಿ ಅವಶ್ಯಕತೆ ಗುರುತಿಸುವಿಕೆ ಹಾಗೂ ವಾರ್ಷಿಕ ತರಬೇತಿ ಕ್ಯಾಲೆಂಡರ್ ತಯಾರಿಕೆ<br>➢ ತರಬೇತಿ ಕಾರ್ಯಕ್ರಮಗಳ ಮೌಲ್ಯ ಮ್ಯಾಪನ<br>➢ ಜಿಲ್ಲೆಗಳ ವಿವಿಧ ಭಾಗಗಳಿಗೆ ಭೇಟಿ ನೀಡಿ ರೈತರು ಮತ್ತು ಕ್ಷೇತ್ರ ಮಟ್ಟದ ಕಾರ್ಯಕರ್ತರೊಂದಿಗೆ ಚರ್ಚೆ.<br>➢ ಮೇಲಾಧಿಕಾರಿಗಳು ಆಗಿಂದಾಗ್ಯೆ ಸೂಚಿಸುವ ಯಾವುದೇ ಕೆಲಸದ ನಿರ್ವಹಣೆ. |
| 3. | ಯೋಜನಾ ನಿರ್ದೇಶಕರು | ➢ ರಾಜ್ಯ ನೋಡಲ್ ಅಧಿಕಾರಿ ಹಾಗೂ ಸಮೇತಿಯೊಂದಿಗೆ ಕಾರ್ಯಸಂಪರ್ಕ ಏರ್ಪಡಿಸುವುದು; ಜಿಲ್ಲೆಯ ವಿವಿಧ ಅಭಿವೃದ್ಧಿ ಇಲಾಖೆಗಳು, ಕೃಷಿ ವಿಜ್ಞಾನ ಕೇಂದ್ರ ಹಾಗೂ ಖಾಸಗಿ ಸಂಘ ಸಂಸ್ಥೆಗಳೊಂದಿಗೆ ಜಿಲ್ಲಾ ಮಟ್ಟದಲ್ಲಿ ಸಮನ್ವಯ ಸಾಧನೆ.<br>➢ ಜಿಲ್ಲೆಯ ವಾರ್ಷಿಕ ಕ್ರಿಯಾ ಯೋಜನೆ ತಯಾರಿಕೆ<br>➢ ಆರ್.ಕೆ.ವಿ.ವೈ ಮತ್ತು ಎನ್.ಎಫ್.ಎಸ್.ಎಮ್ ಹಾಗೂ ವಿಸ್ತರಣಾ ಸುಧಾರಣೆಗಳ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನೆ<br>➢ ಜಿಲ್ಲಾ ಮಟ್ಟದಲ್ಲಿ ಮಾರ್ಗಸೂಚಿ ಪ್ರಕಾರ ಕಾರ್ಯನಿರ್ವಹಿಸುವುದು. ತಾಲ್ಲೂಕುಗಳಿಗೆ ಸಮಯೋಚಿತ ಅನುದಾನ ಬಿಡುಗಡೆ<br>➢ ಪ್ರಗತಿಯ ಕ್ರೋಢೀಕರಣ ಹಾಗೂ ಪ್ರತಿ ತಿಂಗಳ 5ನೆಯ ದಿನಾಂಕದೊಳಗೆ ಕೇಂದ್ರ ಕಛೇರಿ ಮತ್ತು ಭಾರತ ಸರ್ಕಾರಕ್ಕೆ online ಮುಖಾಂತರ ಸಲ್ಲಿಕೆ.<br>➢ ಜಿಲ್ಲಾ ಮಟ್ಟದ ಆತ್ಮ ಕ್ರಿಯಾ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು ಸಮಿತಿಯ ಸಭೆಗಳನ್ನು ಆಗಿಂದಾಗ್ಯೆ ಕರೆಯುವುದು<br>➢ ಮೇಲಾಧಿಕಾರಿಗಳು ಆಗಿಂದಾಗ್ಯೆ ಸೂಚಿಸುವ ಯಾವುದೇ ಕೆಲಸದ ನಿರ್ವಹಣೆ. |

| | | |
|---|---|---|
| 4. | ಉಪ ಯೋಜನಾ ನಿರ್ದೇಶಕರು–1 | ➢ ಸಂಶೋಧನೆ ಸಂಬಂಧಿತ ವಿಷಯ ಹಾಗೂ ಚಟುವಟಿಕೆಗಳ ಒಟ್ಟಾರೆ ಜವಾಬ್ದಾರಿ<br>➢ SREP ಆಧಾರದಲ್ಲಿ ಸ್ಥಾನಿಕ ಸಂಶೋಧನಾ ಅವಶ್ಯಕತೆಗಳ ಆದ್ಯತೆ ನಿರ್ಧರಿಸುವುದು ಹಾಗೂ ಅನುಷ್ಠಾನದ ಪ್ರಗತಿ ಪರಿಶೀಲನೆ.<br>➢ ಕೃಷಿ ವಿಜ್ಞಾನ ಕೇಂದ್ರ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ನಿರತವಾದ ಇತರ ಸಂಸ್ಥೆಗಳೊಡನೆ ಹೊಸ ತಾಂತ್ರಿಕತೆಗಳ ತುಲನೆ, ಪರೀಕ್ಷೆ ಹಾಗೂ ಅನುಕರಣಾ ಚಟುವಟಿಕೆಗಳಲ್ಲಿ ಸಂಯೋಜನೆ.<br>➢ ಜಿಲ್ಲಾ ಮಟ್ಟದ ಸಂಶೋಧನೆ–ವಿಸ್ತರಣೆ–ರೈತ–ಚರ್ಚಾ ಗೋಷ್ಠಿ, ಕೃಷಿ ಮೇಳ, ವಸ್ತು ಪ್ರದರ್ಶನ, ಏರ್ಪಡಿಸುವಿಕೆ.<br>➢ ಕೃಷಿ ವಿಜ್ಞಾನ ಕೇಂದ್ರ ಹಾಗೂ ಇತರ ಸಂಸ್ಥೆಗಳ ಸಹಯೋಗದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳ ಸಾಮರ್ಥ್ಯ ವರ್ಧನೆ<br>➢ ಮೇಲಾಧಿಕಾರಿಗಳು ಆಗಿಂದಾಗೆ ಸೂಚಿಸುವ ಯಾವುದೇ ಕೆಲಸದ ನಿರ್ವಹಣೆ |
| 5. | ಉಪ ಯೋಜನಾ ನಿರ್ದೇಶಕರು–2 | ➢ ಖಾಸಗಿ ಸಂಸ್ಥೆಗಳು ಸೇರಿ ವಿವಿಧ ಅಭಿವೃದ್ಧಿ ಇಲಾಖೆಗಳೊಡನೆ ಸಂಯೋಜನೆ<br>➢ ತಾಲ್ಲೂಕು ಕ್ರಿಯಾ ಯೋಜನೆಗಳನ್ನು ಜಿಲ್ಲೆಯ ಕೃಷಿ ಕ್ರಿಯಾ ಯೋಜನೆಯಲ್ಲಿ ಅಳವಡಿಸುವಿಕೆ.<br>➢ ಡಿ.ಎ.ಇ.ಪಿ. ಆರ್.ಕೆ.ವಿ.ವೈ ಹಾಗೂ ಎನ್.ಎಫ್.ಎಸ್.ಎಮ್ ಯೋಜನೆಗಳ ಅನುಷ್ಠಾನ ಹಾಗೂ ಮೌಲ್ಯಮಾಪನ ವಿವರವನ್ನು ಆತ್ಮ ಯೋಜನಾ ನಿರ್ದೇಶಕರಿಗೆ ನೀಡುವುದು.<br>➢ ರೈತರ ಮತ್ತು ರೈತ ಆಸಕ್ತ ಗುಂಪುಗಳ ಸಾಮರ್ಥ್ಯ ವರ್ಧನೆಯನ್ನು ಕೃಷಿ ವಿಜ್ಞಾನ ಕೇಂದ್ರ ಹಾಗೂ ಇತರ ಸಂಸ್ಥೆಗಳ ಸಹಯೋಗದಿಂದ ನಿರ್ವಹಣೆ.<br>➢ ಮೇಲಾಧಿಕಾರಿಗಳು ಆಗಿಂದಾಗೆ ಸೂಚಿಸುವ ಯಾವುದೇ ಕೆಲಸದ ನಿರ್ವಹಣೆ |
| 6 | ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು | ➢ ತಾಲ್ಲೂಕು ಮಟ್ಟದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳೊಡನೆ ಸಂಯೋಜನೆ<br>➢ ತಾಲ್ಲೂಕು ತಾಂತ್ರಿಕ ತಂಡ ಹಾಗೂ ರೈತ ಸಲಹಾ ಸಮಿತಿಯ ಸಭೆಗಳನ್ನು ಏರ್ಪಡಿಸುವುದು.<br>➢ ಅನುಷ್ಠಾನ ಪ್ರಗತಿಯ ಕ್ರೋಢೀಕರಣ ಹಾಗೂ ಪ್ರತಿ ತಿಂಗಳ 3ನೇ ತಾರೀಖಿನ ಒಳಗೆ ಜಿಲ್ಲೆಗೆ ವರದಿ ಸಲ್ಲಿಕೆ:<br>➢ ತಾಲ್ಲೂಕು ಮಟ್ಟದ ಆತ್ಮ ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು ಸಮಿತಿಯ ಸಭೆಗಳನ್ನು ಆಗಿಂದಾಗ್ಯೆ ಕರೆಯುವುದು.<br>➢ ರೈತರು ಮತ್ತು ರೈತ ಗುಂಪುಗಳಿಗೆ ಕೃಷಿ ಮತ್ತು ಸಂಬಂಧಿತ ಇಲಾಖೆಗಳೊಡನೆ ಚರ್ಚಿಸಿ ಬೇಕಾದ ತಾಂತ್ರಿಕ ಸಲಹೆ ನೀಡುವುದು ಹಾಗೂ ಪ್ರತಿ ತಾಲ್ಲೂಕಿನಲ್ಲಿ ರೈತ ಗುಂಪು/ರೈತ ಆಸಕ್ತಿ ಗುಂಪುಗಳ ದಾಖಲೆ ಇಡುವುದು.<br>➢ ಕ್ಷೇತ್ರ ಪಾಠಶಾಲೆಗಳ ಅನುಷ್ಠಾನ<br>➢ ತಾಲ್ಲೂಕಿನ ರೈತ ಆಸಕ್ತಿ ಗುಂಪು ಹಾಗೂ ರೈತ ಗುಂಪುಗಳ ಚಟುವಟಿಕೆ ಹಾಗೂ ಪ್ರಗತಿ ವರದಿ ಸಂಗ್ರಹಣೆ.<br>➢ ತಾಲ್ಲೂಕು ಕ್ರಿಯಾ ಯೋಜನೆಯನ್ನು ತಯಾರಿಸುವುದು. |

| | | |
|---|---|---|
| | | ➢ ಮೇಲಾಧಿಕಾರಿಗಳು ಆಗಿಂದಾಗೆ ಸೂಚಿಸುವ ಯಾವುದೇ ಕೆಲಸದ ನಿರ್ವಹಣೆ |
| 7. | ವಿಷಯ ತಜ್ಞರು | ➢ ಕೃಷಿ ಮತ್ತು ಕೃಷಿಯೇತರ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳ ಹಾಗೂ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರ ಮುಖಾಂತರ ಸಾಮಾನ್ಯ ಸೇವಾ ಕೇಂದ್ರಗಳು ಹಾಗೂ ಕಿಸಾನ್ ಕಾಲ್ ಸೆಂಟರ್‌ಗಳಿಗೆ ಅವಶ್ಯಕ ಮಾಹಿತಿ ಒದಗಿಸುವುದು.<br>➢ ತಾಲ್ಲೂಕು ತಂತ್ರಜ್ಞಾನ ವ್ಯವಸ್ಥಾಪಕರ ತಾಂತ್ರಿಕ ಸಹಾಯದೊಂದಿಗೆ ಕ್ಷೇತ್ರ ಪಾಠ ಶಾಲೆ, ರೈತ ಮಿತ್ರ, ರೈತ ಗುಂಪುಗಳಿಗೆ ಹಾಗೂ ಎಲ್ಲಾ ರೈತರಿಗೂ ಅವಶ್ಯಕ ಕೃಷಿ ತಂತ್ರಜ್ಞಾನದ ಮಾಹಿತಿ ನೀಡುವುದು.<br>➢ ಮೇಲಾಧಿಕಾರಿಗಳು ಆಗಿಂದಾಗ್ಯೆ ಸೂಚಿಸುವ ಯಾವುದೇ ಕೆಲಸದ ನಿರ್ವಹಣೆ |
| 8 | ಕಂಪ್ಯೂಟರ್ ಪ್ರೋಗ್ರಾಮರ್ | ➢ "ಡಾಟಾ"ವನ್ನು ಫೀಡ್ ಮತ್ತು ವಿಶ್ಲೇಷಣೆ ಮಾಡುವುದು<br>➢ ವಿಶೂಯಲ್ ಪ್ರೋಗ್ರಾಮಿಂಗ್ ಮತ್ತು C , C++ programming ಜ್ಞಾನವಿರಬೇಕು.<br>➢ ಆವಾಗವಾಗ ನೀಡುವ ಟೈಪಿಂಗ್ ಕೆಲಸ– ಕನ್ನಡ ಮತ್ತು ಆಂಗ್ಲ ಎರಡೂ ಭಾಷೆಗಳಲ್ಲಿ<br>➢ ತನಗೆ ನೀಡಿರುವ ಕಂಪ್ಯೂಟರ್‌ನ್ನು ಸ್ವಚ್ಛವಾಗಿ ಹಾಗೂ ಉತ್ತಮ ಸ್ವಸ್ತಿತಿಯಲ್ಲಿ ಇಡುವುದು.<br>➢ ಮೇಲಾಧಿಕಾರಿಗಳು ಆಗಿಂದಾಗ್ಯೆ ಸೂಚಿಸುವ ಯಾವುದೇ ಕೆಲಸದ ನಿರ್ವಹಣೆ |
| 9. | ಅಕೌಂಟೆಂಟ್ ಕಮ್ ಕ್ಲರ್ಕ್ | ➢ ಯೋಜನೆಗೆ ಸಂಬಂಧಿಸಿದ ಪತ್ರ ವ್ಯವಹಾರ/ಆರ್ಥಿಕ ವ್ಯವಹಾರ ಮಾಡುವುದು ಹಾಗೂ ಅವುಗಳ ದಾಖಲೆ ಮತ್ತು ಕಡತಗಳ ನಿರ್ವಹಣೆ.<br>➢ ಮೇಲಾಧಿಕಾರಿಗಳು ಆಗಿಂದಾಗ್ಯೆ ಸೂಚಿಸುವ ಯಾವುದೇ ಕೆಲಸದ ನಿರ್ವಹಣೆ |

**ಒಪ್ಪಂದದ ನೇಮಕಾತಿಯ ನಿಬಂಧನೆ ಹಾಗೂ ಷರತ್ತುಗಳು ಈ ಕೆಳಕಂಡಂತಿರುತ್ತವೆ.**

ಇವರ ಒಪ್ಪಂದದ ನೇಮಕಾತಿ ಅವಧಿಯು ದಿನಾಂಕ: ರಿಂದ ಪ್ರಾರಂಭಗೊಂಡು 179 ದಿನಗಳವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.

1. ಇವರ ಒಪ್ಪಂದದ ನೇಮಕಾತಿ ಕ್ರೋಢೀಕೃತ ಮಾಸಿಕ ಸಂಬಳ ದಿನಾಂಕ: ರಿಂದ ರೂ. ಎಂದು ನಿಗದಿಪಡಿಸಲಾಗಿದೆ. ಇದಲ್ಲದೆ ಇನ್ನಿತರ ಯಾವುದೇ ಭತ್ಯೆಗಳಿಗೂ ಇವರು ಅರ್ಹರಾಗಿರುವುದಿಲ್ಲ.
2. ಇವರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಪ್ರವಾಸ ಮಾಡುವುದು ಅವರ ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
3. ಸದರಿ ಒಪ್ಪಂದದ ನೌಕರರು ಪ್ರತಿ ಮಾಹೆಗೆ ಒಂದರಂತೆ ಸಾಂದರ್ಭಿಕ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಸಕ್ಷಮ ಒಪ್ಪಂದದ ಪ್ರಾಧಿಕಾರದ ಅನುಮತಿ ಪಡೆಯದೇ ವೈದ್ಯಕೀಯ ಕಾರಣಗಳ ಮೇಲಾಗಲಿ ಅಥವಾ ಬೇರೆ ಕಾರಣಗಳಿಂದಾಗಲಿ ಅನಧಿಕೃತ ಗೈರುಹಾಜರಿಯಾದಲ್ಲಿ ಗುತ್ತಿಗೆ ಆಧಾರದ ನೇಮಾಕಾತಿಯು ತಾನಾಗೇ ರದ್ದಾಗುತ್ತದೆ.
5. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು ವೈದ್ಯಕೀಯ ಕಾರಣಗಳ ಮೇಲಾಗಲಿ ಅಥವಾ ಸಮರ್ಥನೀಯ ಕಾರಣಗಳ ಮೇರೆಗೆ ಗುತ್ತಿಗೆ ಆಧಾರದ ಅವಧಿಯಲ್ಲಿ ಒಂದು ತಿಂಗಳಿಗೆ ಮೀರದಂತೆ ಗೈರುಹಾಜರಾದಲ್ಲಿ ಆ ಕಾರಣದಿಂದ ಗುತ್ತಿಗೆ ನೇಮಕಾತಿ ರದ್ದಾಗುವುದಿಲ್ಲ. ಆದರೆ ಈ ಅವಧಿಯನ್ನು ಕರ್ತವ್ಯರಹಿತ ದಿನ (ಡೈಸ್‌ಪಾಸ್)ಗಳೆಂದು ಪರಿಗಣಿಸಲಾಗುವುದು ಮತ್ತು ಅವರು ಈ ಅವಧಿಗೆ ಯಾವುದೇ ವೇತನ ಮತ್ತು ಇತರ ಸೌಲಭ್ಯಗಳಿಗೆ ಅರ್ಹರಾಗಿರುವುದಿಲ್ಲ.
6. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ, ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
7. ಆಯಾ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಆಯ್ಕೆಗೊಂಡ ಅಭ್ಯರ್ಥಿಗಳು ಆಯಾ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸತಕ್ಕದ್ದು. ಯಾವುದೇ ಸ್ಥಳ ಬದಲಾವಣೆಗೆ ಬರುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗದು
8. ಸದರಿ ನೌಕರರ ದುರ್ವರ್ತನೆ, ನಿರ್ಲಕ್ಷ್ಯತೆಯ ನಿಮಿತ್ತ ಸರ್ಕಾರಕ್ಕೆ ಸಂಭವಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ದರಾಗಿರತಕ್ಕದ್ದು.
9. ಸದರಿ ಒಪ್ಪಂದದ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಖಾಯಂ ಎಂದು ಪರಿಗಣಿಸಲಾಗುವುದಿಲ್ಲ.
10. ಇವರು ತಮ್ಮ ಕರ್ತವ್ಯ, ಕಾರ್ಯವನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ನಿರ್ವಹಿಸತಕ್ಕದ್ದು.
11. ಇವರು ತಮ್ಮ ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
12. ಇವರು 1966ರ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿಗಳು ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗಿಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳಿಗೆ ಬದ್ದರಾಗಿರತಕ್ಕದ್ದು.
13. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿ ತಾನಾಗಿಯೇ ಮುಕ್ತಾಯವಾಗುತ್ತದೆ.
14. ಇವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷ್ಯತೆ, ಉದಾಸೀನತೆಯಿಂದಾಗಲಿ ಸರ್ಕಾರಕ್ಕೆ ಆದ ಆರ್ಥಿಕ ನಷ್ಟವನ್ನು ತುಂಬಿಕೊಡಲು ಹೊಣೆಯಾಗಿರುತ್ತಾರೆ.
15. ಹುದ್ದೆಗೆ ನಿಗದಿಪಡಿಸಿದ ಕರ್ತವ್ಯಗಳನ್ನು ಹಾಗೂ ಮೇಲಧಿಕಾರಿಗಳು ಆಗಿಂದಾಗ್ಯೆ ಹೇಳುವ ಕರ್ತವ್ಯಗಳನ್ನು ಚಾಚೂ ತಪ್ಪದೆ ನಿರ್ವಹಿಸುವುದು.

ಸಾಕ್ಷಿಗಳು: ಸಹಿ

1.

2.

# ಅನುಬಂಧ–1

| ಕ್ರ.ಸಂ | ಹುದ್ದೆ | ನೀಡಬೇಕಾಗಿರುವ ವೇತನ (ರೂ) | ಅನ್ವಯವಾಗುವ ತಾಲ್ಲೂಕುಗಳು/ಜಿಲ್ಲೆಗಳು/ಸಮೇತಿ |
|---|---|---|---|
| 1 | ಉಪ ನಿರ್ದೇಶಕರು | 28575 | ಸಮೇತಿ ದಕ್ಷಿಣ, ಕೃ.ವಿ.ವಿ, ಬೆಂಗಳೂರು |
| | | 26951 | ಸಮೇತಿ ಉತ್ತರ, ಕೃ.ವಿ.ವಿ, ಧಾರವಾಡ |
| 2 | ಯೋಜನಾ ನಿರ್ದೇಶಕರು | 28575 | ಬೆಂಗಳೂರು ನಗರ ಮತ್ತು ಗ್ರಾಮಾಂತರ |
| | | 26951 | ಮೈಸೂರು ಮತ್ತು ಧಾರವಾಡ |
| | | 25935 | ಮಂಗಳೂರು, ಬೆಳಗಾವಿ, ಗುಲ್ಬರ್ಗ, ಬಳ್ಳಾರಿ, ಬೀದರ್, ಬಿಜಾಪುರ, ಬಾಗಲಕೋಟೆ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೋಲಾರ, ಕಾರವಾರ, ಗದಗ, ಶಿವಮೊಗ್ಗ, ತುಮಕೂರು, ರಾಮನಗರ, ರಾಯಚೂರು ಮತ್ತು ಮಂಡ್ಯ (19 ಜಿಲ್ಲೆಗಳು) |
| | | 25467 | ಚಿಕ್ಕಬಳ್ಳಾಪುರ, ಹಾವೇರಿ, ಕೊಪ್ಪಳ, ಮಡಿಕೇರಿ, ಉಡುಪಿ, ಚಾ.ನಗರ, ಯಾದಗಿರಿ. (7 ಜಿಲ್ಲೆಗಳು) |
| 3. | ಉಪಯೋಜನಾ ನಿರ್ದೇಶಕರು | 27575 | ಬೆಂಗಳೂರು ನಗರ ಮತ್ತು ಗ್ರಾಮಾಂತರ |
| | | 25951 | ಮೈಸೂರು ಮತ್ತು ಧಾರವಾಡ |
| | | 24935 | ಮಂಗಳೂರು, ಬೆಳಗಾವಿ, ಗುಲ್ಬರ್ಗ, ಬಳ್ಳಾರಿ, ಬೀದರ್, ಬಿಜಾಪುರ, ಬಾಗಲಕೋಟೆ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೋಲಾರ, ಕಾರವಾರ, ಗದಗ, ಶಿವಮೊಗ್ಗ, ತುಮಕೂರು, ರಾಮನಗರ, ರಾಯಚೂರು ಮತ್ತು ಮಂಡ್ಯ (19 ಜಿಲ್ಲೆಗಳು) |
| | | 24467 | ಚಿಕ್ಕಬಳ್ಳಾಪುರ, ಹಾವೇರಿ, ಕೊಪ್ಪಳ, ಮಡಿಕೇರಿ, ಉಡುಪಿ, ಚಾ.ನಗರ, ಯಾದಗಿರಿ. (7 ಜಿಲ್ಲೆಗಳು) |
| 4 | ಅಕೌಂಟೆಂಟ್ ಕಮ್ ಕ್ಲರ್ಕ್ | 17156 | ಬೆಂಗಳೂರು ನಗರ ಮತ್ತು ಗ್ರಾಮಾಂತರ |
| | | 16099 | ಮೈಸೂರು ಮತ್ತು ಧಾರವಾಡ |
| | | 15461 | ಮಂಗಳೂರು, ಬೆಳಗಾವಿ, ಗುಲ್ಬರ್ಗ, ಬಳ್ಳಾರಿ, ಬೀದರ್, ಬಿಜಾಪುರ, ಬಾಗಲಕೋಟೆ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೋಲಾರ, ಕಾರವಾರ, ಗದಗ, ಶಿವಮೊಗ್ಗ, ತುಮಕೂರು, ರಾಮನಗರ, ರಾಯಚೂರು ಮತ್ತು ಮಂಡ್ಯ (19 ಜಿಲ್ಲೆಗಳು) |
| | | 15182 | ಚಿಕ್ಕಬಳ್ಳಾಪುರ, ಹಾವೇರಿ, ಕೊಪ್ಪಳ, ಮಡಿಕೇರಿ, ಉಡುಪಿ, ಚಾ.ನಗರ, ಯಾದಗಿರಿ. (7 ಜಿಲ್ಲೆಗಳು) |
| 5. | ಕಂಪ್ಯೂಟರ್ ಪ್ರೋಗ್ರಾಮರ್ | 12000 | ಎಲ್ಲಾ ಜಿಲ್ಲೆಗಳಿಗೆ (ಸಮೇತಿ ಸೇರಿ) |
| 6. | ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು | 20000 | ಎಲ್ಲಾ ತಾಲ್ಲೂಕುಗಳಿಗೆ |
| 7. | ವಿಷಯ ತಜ್ಞರು | 8500 | ಎಲ್ಲಾ ತಾಲ್ಲೂಕುಗಳಿಗೆ |

| ಖಾಲಿ ಇರುವ ಹುದ್ದೆಗಳ ಪಟ್ಟಿ | | | | | | | | | | | |
|---|---|---|---|---|---|---|---|---|---|---|---|
| ಕ್ರ.ಸಂ | ಜಿಲ್ಲೆ | ತಾಲ್ಲೂಕುಗಳು | ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು | ವಿಷಯ ತಜ್ಞರು | ಅಕೌಂಟೆಂಟ್ ಕಮ್ ಕ್ಲರ್ಕ್ | ಕಂಪ್ಯೂಟರ್ ಪ್ರೋಗ್ರಾಮರ್ | ಯೋಜನಾ ನಿರ್ದೇಶಕರು | ಉಪಯೋಜನಾ ನಿರ್ದೇಶಕರು | ಉಪ ನಿರ್ದೇಶಕರು | ಆತ್ಮ ಸಂಯೋಜಕರು | ಒಟ್ಟು |
| 1 | ಬಾಗಲಕೋಟೆ | 6 | 1 | 4 | 1 | 1 | 1 | 2 | – | 0 | 10 |
| 2 | ಬೆಂಗಳೂರು(ನ) | 4 | 1 | 2 | 0 | 0 | 1 | 1 | – | 0 | 5 |
| 3 | ಬೆಂಗಳೂರು(ಗ್ರಾ) | 4 | – | 2 | 0 | – | 1 | 1 | – | 0 | 4 |
| 4 | ಬೆಳಗಾವಿ | 10 | 6 | 7 | 0 | 0 | 1 | 0 | – | 0 | 14 |
| 5 | ಬಳ್ಳಾರಿ | 7 | 1 | 3 | 1 | 1 | 1 | 1 | – | 0 | 8 |
| 6 | ಬೀದರ್ | 5 | 1 | 2 | 0 | 0 | 0 | 1 | – | 0 | 4 |
| 7 | ಬೀಜಾಪುರ | 5 | 0 | 1 | 0 | 0 | 0 | 1 | – | 0 | 2 |
| 8 | ಚಾ.ನಗರ | 4 | 1 | 2 | 0 | 1 | 1 | 1 | – | 0 | 6 |
| 9 | ಚಿಕ್ಕಬಳ್ಳಾಪುರ | 6 | 4 | 5 | 0 | 0 | 1 | 2 | – | 0 | 12 |
| 10 | ಚಿಕ್ಕಮಗಳೂರು | 7 | 3 | 2 | 0 | 0 | 1 | 2 | – | 0 | 8 |
| 11 | ಚಿತ್ರದುರ್ಗ | 6 | 0 | 0 | 0 | 0 | 1 | 1 | – | 0 | 2 |
| 12 | ದಾವಣಗೆರೆ | 6 | 1 | 3 | 0 | 1 | 1 | 1 | – | 0 | 7 |
| 13 | ದಕ್ಷಿಣಕನ್ನಡ | 5 | 1 | 5 | 0 | 0 | 1 | 1 | – | 0 | 8 |
| 14 | ಧಾರವಾಡ | 5 | 0 | 2 | 0 | 1 | 0 | 2 | – | 0 | 5 |
| 15 | ಗದಗ | 5 | 0 | 0 | 0 | 0 | 1 | 1 | – | 0 | 2 |
| 16 | ಗುಲ್ಬರ್ಗ | 7 | 4 | 6 | 1 | 0 | 1 | 2 | – | 0 | 14 |
| 17 | ಹಾಸನ್ | 8 | 1 | 8 | 0 | 0 | 1 | 1 | – | 0 | 11 |
| 18 | ಹಾವೇರಿ | 7 | 4 | 5 | 0 | 0 | 1 | 1 | – | 0 | 11 |
| 19 | ಕೊಡಗು | 3 | 2 | 3 | 0 | 0 | 1 | 1 | – | 0 | 7 |
| 20 | ಕೋಲಾರ | 5 | 0 | 5 | 1 | 1 | 1 | 2 | – | 0 | 10 |
| 21 | ಕೊಪ್ಪಳ | 4 | 0 | 3 | 0 | 0 | 1 | 1 | – | 0 | 5 |
| 22 | ಮಂಡ್ಯ | 7 | 0 | 3 | 0 | 0 | 0 | 1 | – | 0 | 4 |
| 23 | ಮೈಸೂರು | 7 | 6 | 0 | 0 | 0 | 0 | 1 | – | 0 | 7 |
| 24 | ರಾಯಚೂರು | 5 | 2 | 0 | 1 | 0 | 0 | 2 | – | 0 | 5 |
| 25 | ರಾಮನಗರ | 4 | 0 | 4 | 0 | 0 | 1 | 1 | – | 0 | 6 |
| 26 | ಶಿವಮೊಗ್ಗ | 7 | 4 | 3 | 0 | 0 | 0 | 1 | – | 0 | 8 |
| 27 | ತುಮಕೂರು | 10 | 2 | 3 | 0 | 0 | 0 | 0 | – | 0 | 5 |
| 28 | ಉಡುಪಿ | 3 | 1 | 3 | 0 | 0 | 1 | 2 | – | 0 | 7 |
| 29 | ಉ.ಕನ್ನಡ | 11 | 6 | 10 | 0 | 0 | 0 | 2 | – | 0 | 18 |
| 30 | ಯಾದಗಿರಿ | 3 | 0 | 1 | 0 | 0 | 1 | 2 | – | 0 | 4 |
| 31 | ಸಮಿತಿ(ದ) | 0 | – | – | 1 | – | – | – | 2 | 0 | 3 |
| 32 | ಸಮಿತಿ(ಉ) | 0 | – | – | – | – | – | – | 3 | 0 | 3 |
| 33 | ಕೇಂದ್ರ ಕಛೇರಿ | | 0 | 0 | 0 | 0 | 0 | 0 | 0 | 1 | 1 |
| | ಒಟ್ಟು | 176 | 52 | 97 | 6 | 6 | 21 | 38 | 5 | 1 | 226 |